ಉಪಾಧ್ಯಕ್ಷರು : ಹತ್ತು ನಿಮಿಷ ಮಾತನಾಡಿರಿ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ನಾನು ಪ್ರಾರಂಭ ಮಾಡುವುದು ಅದು ಸರಿಯಾಗುವುದಿಲ್ಲ. ಅವರು ಕೂತಿರುತ್ತಾರೆ, ನಾವು ಮಾತನಾಡುವುದು ಸರಿಯಲ್ಲ. ಹೇಗಿದ್ದರೂ ನಾನು ಮಾತನಾಡಿದರೆ ಹೆಚ್ಚೆಂದರೆ ಹತ್ತು. ನಿಮಿಷ ಆಗಬಹುದು. ಹತ್ತು ನಿಮಿಷದೊಳಗೆ ಅಂತಹ ಮಹತ್ವದ ಬದಲಾವಣೆ ಏನೂ ಆಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಉಪಾಧ್ಯಕ್ಷರೇ, ಈಗ ತಾವು ಅಡ್ಜರ್ನ್ ಮಾಡಿ ಮತ್ತೆ 2-20 ಗಂಟೆಗೆ ನಾವು ಸೇರಬಹುದು.

1.20 ಪಿ.ಎಂ

ಶ್ರೀ ಕಾಗೋಡು ತಿಮ್ಮಪ್ಪ : ಅವರು ಬಾವಿಯಲ್ಲಿ ಕುಳಿತಿದ್ದಾರೆ, ನಾನು ಭಾಷಣ ಮಾಡಿದರೆ ಅದು ಸರಿ ಹೋಗುವುದಿಲ್ಲ. ಇವತ್ತಿನವರೆಗೆ ನಾವು ಈ ತರಹ ಮಾಡಿಲ್ಲ.

ಸಚಿವರ ಹೇಳಿಕೆ

ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ತೊಂದರೆ

+ ಶ್ರೀ ರಮೇಶ್. ಸಿ. ಜಿಗಜಿಣಗಿ (ಕಂದಾಯ ಮಂತ್ರಿಗಳು) : ಹೋದ ವಾರ ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಶಾಸಕರುಗಳು ಮಳೆಯಿಂದ ಬಹಳ ಹಾನಿಯಾಗಿದೆ ಎಂದು ಹೇಳಿದರು. ನಾನು ಒಂದು ಹೇಳಿಕೆಯನ್ನು ಕೊಟ್ಟು ಮಾತನಾಡುತ್ತಾ ಹೇಳಿದೆ ತಾವು ಅಪ್ಪಣೆಯನ್ನು ಕೊಟ್ಟರೆ ನಾನು ಸ್ಟೇಟ್‌ಮೆಂಟ್‌ನ್ನು ಮಾಡುತ್ತೇನೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜುಲೈ ಅಂತ್ಯದವರೆಗಿನ ಮುಂಗಾರು ಮಳೆಯಿಂದ ನಾಲ್ವರು ಮೃತಪಟ್ಟು ಮೂವರು ಗಾಯಾಳುಗಳಾಗಿದ್ದರೆ, 8 ಜಾನುವಾರುಗಳು ಮೃತಪಟ್ಟಿದ್ದವು. 8 ವಾಸದ ಮನೆಗಳು ಹಾಗೂ ಸುಮಾರು40ಎರಕೆ ಕೃಷಿ ಬೆಳೆ ಹಾನಿಗೊಂಡಿತ್ತು.29ಸೇತುವೆಗಳು,87ರಸ್ತೆಗಳು, 8 ಸಣ್ಣ ನೀರಾವರಿ ಕೆರೆಗಳು ಹಾಗೂ 7 ಕಾಲುವೆಗಳು ಹಾನಿಗೆ ಒಳಗಾಗಿದ್ದವು. ಒಟ್ಟಾರೆ ಹಾನಿಯನ್ನು ರೂ.190.00ಲಕ್ಷಗಳೆಂದು ಅಂದಾಜಿಸಲಾಗಿದೆ. ಆದರೆ, ಆಗಸ್ಟ್ ಮೊದಲವಾರದಲ್ಲಿನ ಮಳೆಯಿಂದಾಗಿ ಮೂಡಿಗೆರೆ ತಾಲ್ಲೂಕಿನಲ್ಲಿ ದೋಣಿ ಮುಳುಗಿ ಒಂದು ಸಾವು ಹಾಗೂ ಹೊಳೆ ದಾಟುವಾಗ ಸಂಕದಿಂದ ಜಾರಿ ಒಂದು ಸಾವು ಸಂಭವಿಸಿರುತ್ತದೆ. ಮೂಡಿಗೆರೆ ತಾಲ್ಲೂಕಿನಲ್ಲಿ 15 ಎಕರೆ ಹಾಗೂ ಶೃಂಗೇರಿ ತಾಲ್ಲೂಕಿನಲ್ಲಿ 1.10ಎಕರೆ ಪ್ರದೇಶದಲ್ಲಿ ಮಣ್ಣು ಮುಚ್ಚಿರುತ್ತದೆ. ಭಾರಿ ಮಳೆಯಿಂದಾಗಿ ವಿಶೇಷವಾಗಿ ಶೃಂಗೇರಿ, ಕೊಪ್ಪ, ಮೂಡಿಗೆರೆ ತಾಲ್ಲೂಕುಗಳಲ್ಲಿ ರಸ್ತೆಗಳು ಹಾಗೂ ಸೇತುವೆಗಳು ಹಾಳಾಗಿದ್ದು, ಕೆಲವು ಕಡೆ ರಸ್ತೆ ಸಂಚಾರವೂ ಸಹ ಸ್ಥಗಿತಗೊಂಡಿದ್ದು, ಪರ್ಯಾಯ ವ್ಯವಸ್ಥೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಪರಿಹಾರ ಕಾರ್ಯಗಳಿಗಾಗಿ ರೂ. 20.00 ಲಕ್ಷಗಳನ್ನು ಒದಗಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಜುಲೈ ಅಂತ್ಯದವರೆಗೆ ಸಿಡಿಲು ಬಡಿತದಿಂದ ಐವರು ಮೃತಪಟ್ಟಿದ್ದು, ಸೊರಬ ತಾಲ್ಲೂಕಿನಲ್ಲಿ ಒಂದು ಜಾನವಾರು ಸತ್ತಿದೆ. ಶಿವಮೊಗ್ಗ, ತೀರ್ಥಹಳ್ಳಿ ಹಾಗೂ ಸಾಗರ ತಾಲ್ಲೂಕುಗಳಲ್ಲಿ ಸುಮಾರು 1364 ಎಕರೆ ವಿಸ್ತೀರ್ಣದ ಕೃಷಿ ಬೆಳೆ ಹಾನಿಯಾಗಿದ್ದು, ನಷ್ಟವನ್ನು ಅಂದಾಜಿಸಲಾಗುತ್ತಿದೆ. ಜಿಲ್ಲೆಯಲ್ಲಿ ಕಳೆದ ನಾಲ್ಕೈದು ದಿನಗಳಲ್ಲಿ ಸಂಭವಿಸಿದ ಭಾರಿ ಮಳೆಯ ಪರಿಣಾಮವಾಗಿ ನದಿ-ಹಳ್ಳಗಳು ಪ್ರವಾಹದಿಂದ ಉಕ್ಕಿ ಹರಿದು ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಹಾನಿಯುಂಟಾಗಿರುತ್ತದೆ. ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ, ಶಿಕಾರಿಪುರ ಹಾಗೂ ಶಿವಮೊಗ್ಗ ತಾಲ್ಲೂಕುಗಳಲ್ಲಿ ಹೆಚ್ಚಿನ ಹಾನಿಯಾಗಿದ್ದು, ಅಂದಾಜು ನಷ್ಟ ಗುರುತಿಸುವ ಕಾರ್ಯ ತುರ್ತಾಗಿ ನಡೆದಿದೆ.

ಸಾಗರ ತಾಲ್ಲೂಕಿನ ವರದಾ ನದಿಯ ಪ್ರವಾಹದಿಂದ ಬಂದಕಡಲೆ ಗ್ರಾಮಕ್ಕೆ ನೀರು ನುಗ್ಗಿದೆ ಹಾಗೂ ಹೊಸನಗರ ತಾಲ್ಲೂಕಿನ ಬಾಣಂತಿಕೆರೆ ಒಡೆದು ಕೆರೆಯ ಅಚ್ಚುಕಟ್ಟು ಪ್ರದೇಶದ ಜಮೀನುಗಳಿಗೆ ನಷ್ಟ ಉಂಟಾಗಿದೆ. ಕಳೆದ ಎರಡು ದಿನಗಳಿಂದ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆ ಆಗಿದ್ದು, ನದಿಗಳ ನೀರಿನ ಮಟ್ಟ ಕಡಿಮೆಯಾಗುತ್ತಿದೆ ಹಾಗೂ ವಾಹನ ಸಂಚಾರ ಯಥಾಸ್ಥಿತಿಗೆ ಬಂದಿರುತ್ತದೆ. ಅಲ್ಲದೇ, ಜಲಾವೃತ್ತಗೊಂಡ ಭತ್ತದ ಗದ್ದೆ-ಹೊಲಗಳಲ್ಲಿ ನೀರು ಇಳಿದಿರುತ್ತದೆ.

ಜಿಲ್ಲೆಯಲ್ಲಿ ನದಿಗಳ ನೀರಿನ ಮಟ್ಟ ಅಪಾಯದ ಮಟ್ಟ ತಲುಪುವುದನ್ನು ಕಾಲಕಾಲಕ್ಕೆ ಗಮನಿಸಿ ನದಿ ದಡದ ಮೇಲೆ ಹಾಗೂ ತಗ್ಗು ಪ್ರದೇಶಗಳಲ್ಲಿ ವಾಸವಾಗಿದ್ದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು, ಸಂತ್ರಸ್ತರ ತಾತ್ಕಾಲಿಕ ವಸತಿಗಾಗಿ ಶಾಲೆ ಮತ್ತು ಸಮುದಾಯ ಭವನಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಪರಿಹಾರ ಕಾರ್ಯಗಳಿಗಾಗಿ ಬಾಧಿಕ ತಾಲ್ಲೂಕುಗಳಿಗೆ ಜಿಲ್ಲಾಧಿಕಾರಿಗಳು ರೂ. 10.00 ಲಕ್ಷಗಳನ್ನು ಬಿಡುಗಡೆ ಒದಗಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಹ ಪರಿಹಾರ ಕಾರ್ಯಗಳಿಗಾಗಿ ಕ್ರಮವಾಗಿ ರೂ. 20.00 ಲಕ್ಷಗಳು ಹಾಗೂ ರೂ. 100.00 ಲಕ್ಷ ಗಳನ್ನು ಬಿಡುಗಡೆ ಮಾಡಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ ತೀರ್ಥಹಳ್ಳಿ ತಾಲ್ಲೂಕು ಹಾಗೂ ಹೊಸನಗರ ತಾಲ್ಲೂಕಿನಲ್ಲಿ ವ್ಯಾಪಕವಾದ ಹಾನಿಯಾಗಿದ್ದು ಇಪತ್ತು ವಾಹನಗಳ ಓಡಾಟಕ್ಕೆ ತೀವ್ರ ತೊಂದರೆಯಾಗಿದೆ. ರೈತರು ಕಣ್ಣೀರು ಹಾಕುವಂತಹ ಪರಿಸ್ಥಿತಿಯಾಗಿದೆ. ಇವರು ಬಿಡುಗಡೆ ಮಾಡಿರತಕ್ಕಂತ ಯಾವುದೇ ಪರಿಹಾರದ ಹಣ ಅಲ್ಲಿಗೆ ಹೋಗಿ ಮುಟ್ಟಿಲ್ಲ.

ಉಪಾಧ್ಯಕ್ಷರು : ಈಗ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಕ್ಲಾರಿಫಿಕೇಷನ್‌ಗೆ ಅವಕಾಶವಿಲ್ಲ. ತಾವು ದಯಮಾಡಿ ಕೂಡಿ.

ಶ್ರೀ ಅರಗ ಜ್ಞಾನೇಂದ್ರ : ಈಗ ಕೊಟ್ಟಿರುವ ಹಣ ಮತ್ತು ಆಗಿರತಕ್ಕ ಹಾನಿಗೆ ಬಹಳ ವ್ಯತ್ಯಾಸ ಇದೆ. ಸರ್ಕಾರ ಈ ಸಂದರ್ಭದಲ್ಲಿ ನೆರವಿಗೆ ಬರಬೇಕು. ನೆರವಿಗೆ ಬರದಿದ್ದರೆ ಏನು ಅರ್ಥ ಇದೆ.

ದಯಮಾಡಿ, ಮಾನ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲಾಧಿಕಾರಿಯವರ ಜೊತೆ ಸಂಪರ್ಕವಿಟ್ಟುಕೊಂಡು, ಪರಿಹಾರದ ಹಣವನ್ನು ಸರ್ಕಾರದಿಂದ ಆದಷ್ಟು ತುರ್ತಾಗಿ ಬಿಡುಗಡೆ ಮಾಡಿ, ಅಲ್ಲಿ ಆಗತಕ್ಕ ಪರಿಹಾರ ಕಾಮಗಾರಿಗಳನ್ನು ನಡೆಸಿಕೊಡಬೇಕಂತ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಕ್ಲಾರಿಫಿಕೇಷನ್ ಬೇಡ.

ಶ್ರೀ ರಮೇಶ್ ಸಿ ಜಿಗಜಿಣಗಿ : ನಾನು ತಮ್ಮ ಅನುಮತಿಯ ಮೇರೆಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ತಾವು ಅವರಿಗೆ ಕ್ಲಾರಿಫಿಕೇಷನ್‌ಗೆ ಅವಕಕಾಶವನ್ನು ಕೊಡುತ್ತೀರಾ?

ಶ್ರೀ ಆರಗಜ್ಞಾನೇಂದ್ರ : ಪರಿಹಾರದ ಹಣ ಅಲ್ಲಿಗೆ ಹೋಗಿ ತಲುಪಿಲ್ಲ..

ಉಪಾಧ್ಯಕ್ಷರು : ಈಗ ಒಂದು ಗಂಟೆ, ಊಟದ ವಿರಾಮದ ನಂತರ ಸಭೆಯನ್ನು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 1-25ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಭೋಜನ ವಿರಾಮದ ನಂತರ ಸಭೆಯು 3.20 ಕ್ಕೆ ಪ್ರಾರಂಭವಾಯಿತು)

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಮಾನ್ಯ ಸದಸ್ಯರುಗಳಾದ ಶ್ರೀ ಡಿ. ನಾರಾಯಣದಾಸ್,
ಶ್ರೀ ಎಂ ಬಸಪ್ಪ, ಹಾಗೂ ಹೆಚ್.ಬಿ. ಕೃಷ್ಣಮೂರ್ತಿಯವರು ಧರಣಿ ಕುಳಿತಿದ್ದರು)

ಉಪಾಧ್ಯಕ್ಷರು : ನಾರಾಯಣದಾಸ್‌ರವರೆ, ನಾನು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಜೊತೆ ಮಾತನಾಡಿದ್ದೇನೆ. ಅವರು ಮಧ್ಯಾಹ್ನದಲ್ಲಿ ಮುಖ್ಯ ಮಂತ್ರಿಗಳ ಜೊತೆ ಭೇಟಿ ಮಾಡಿಸುತ್ತೇನೆಂದು ಆಶ್ವಾಸನೆ ಕೂಡ ಕೊಟ್ಟಿದ್ದಾರೆ. ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋದರೆ ಮುಂದಿನ ಕಾರ್ಯಕಲಾಪ ನಡೆಸುವುದಕ್ಕೆ ಅನುಕೂಲವಾಗುತ್ತದೆ. ತಾವು ಒಳಗಡೆ ಇದ್ದುಕೊಂಡು ನಾವು ಸದನ ನಡೆಸುವುದು ಹೇಗೆ? ತಾವು ದಯಮಾಡಿ ಸಹಕಾರ ಮಾಡಬೇಕು. ಮಾನ್ಯ ಕಂದಾಯ ಸಚಿವರು ಮತ್ತು ಸಾರಿಗೆ ಸಚಿವರು ಇಬ್ಬರು ಹೇಳಿರುತ್ತಾರೆ. ಅವರು ಇನ್ನು ತಮ್ಮ ನಿಲುವಿನಲ್ಲಿ ಏನು ಬದಲಾವಣೆ ಮಾಡಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಂದೆ ಬೆಳಿಗ್ಗೆ ಹೇಳಿದ್ದೇನೆ ನಾನೇ ಜವಾಬ್ದಾರಿ ತೆಗೆದುಕೊಂಡು ಮುಖ್ಯಮಂತ್ರಿಗಳ ಹತ್ತಿರ ಒಂದು ಸಭೆ ಮಾಡುತ್ತೇನೆ, ಅವರನ್ನು ಕರೆದು ಎಂದು ಹೇಳಿದ್ದೇನೆ, ನಾನು ದಯಮಾಡಿ ಇನ್ನೊಂದು ಸಲ ಮನವಿ ಮಾಡಿಕೊಳ್ಳುತ್ತೇನೆ. ಅವರು ಧರಣಿ ಬಿಟ್ಟು ಎಲ್ಲಾ ಸದಸ್ಯರುಗಳು ತಮ್ಮ ಸ್ಥಳಕ್ಕೆ ಹೋಗಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಇಷ್ಟು ಆಶ್ವಾಸನೆಯನ್ನು ಮಂತ್ರಿಗಳು ಕೊಟ್ಟ ಮೇಲೆ ತಾವು ತಮ್ಮ ಸ್ಥಳಕ್ಕೆ ಹೋಗುವುದು ಒಳ್ಳೆಯದು. ತಿಮ್ಮಪ್ಪನವರೇ ತಾವು ಹೇಳಿ, ಸರ್ಕಾರ ಇಷ್ಟು ಭರವಸೆ ಕೊಟ್ಟು ಮೇಲೂ ತಾವು ಈ ರೀತಿ ಮಾಡಿದರೆ ಹೇಗೆ? ತಾವು ಇದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಜಿಲ್ಲಾ ಪುನರ್ ವಿಂಗಡಣೆಯಲ್ಲಿ ಆಗಿರುವ ತೊಂದರೆ ಕುರಿತು

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಉಪಾಧ್ಯಕ್ಷರೆ, ತಾಲ್ಲೂಕು ಕ್ಷೇತ್ರವನ್ನು ಪುನರ್ ವಿಂಗಡಣೆ ಮಾಡುವ ಸಂದರ್ಭದಲ್ಲಿ ನಮ್ಮ ಮನಸ್ಸಿಗೆ ವಿರೋಧವಾದಂಥ ತೀರ್ಮಾನ ಮಾಡುವುದಕ್ಕೆ ಮುಂಚಿತವಾಗಿ ನಮಗೆ ಒಂದು ಅವಕಾಶವನ್ನು ಕೊಟ್ಟು ಚರ್ಚೆ ವಗೈರೆ ಮಾಡಿ ಮಾಡಬೇಕಾಗಿತ್ತು, ಏನು ಮಾಡದೇ ಮಾಡಿದ್ದಾರೆ ಅಂದರೆ ನಮಗೆ ಬುಲ್ಡೋಜಿಂಗ್ ಮಾಡಿದಂತೆ ಆಗುತ್ತದೆ. ಶಾಸಕರಾದಂಥವರಿಗೆ ಅಂತಹ ಪರಿಸ್ಥಿತಿ ಬಂದು ಒದಗಿದೆ ಅಂದರೆ, ಶಾಸಕರಲ್ಲದವರಿಗೆ ಏನು ಆಗಬಹುದಿತ್ತು ಎನ್ನುವುದನ್ನು ನಾವು ಊಹಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಇದರಲ್ಲಿ ಮುಂದಾಗಬೇಕು, ಶಾಸಕರು ಈ ಸದನದಲ್ಲಿ ಇದ್ದಾರೆ ಅವರು ಅನೇಕ ಮನವಿಗಳನ್ನು ಕೊಟ್ಟಿದ್ದಾರೆ. ಚರ್ಚೆ ಮಾಡಿದ್ದಾರೆ ಅವರನ್ನು ಕರೆಸಿ ಮಾತನಾಡಿ ಅವರಿಗೂ ಸಮಾಧಾನ ಪಡಿಸಿ ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಕಂದಾಯ ಸಚಿವರು ಎಷ್ಟು ಜವಾಬ್ದಾರಿ ತೆಗೆದುಕೊಂಡರು ಮುಖ್ಯ ಮಂತ್ರಿಗಳು ಮಾತನಾಡಿದಂತೆ ಅದು ಪರಿಣಾಮಕಾರಿಯಾಗುವುದಿಲ್ಲ, ಕೆಲವು ಅನಿವಾರ್ಯವಾಗಿ ಅಂತಿಮವಾಗಿ ತೀರ್ಮಾನ ಮಾಡಲೇಬೇಕಾಗುತ್ತದೆ, ಜಿಗಜಿಣಗಿಯವರು ಹೇಳಿದ ರೀತಿಯಲ್ಲಿ ಒಂದು ತೀರ್ಮಾನ ಆಗಲೇಬೇಕು. ತೀರ್ಮಾನ ಮಾಡುವುದಾದರೂ ಕೂಡ ಒಬ್ಬ ಶಾಸಕರು ಇದ್ದಂಥ ಸಂದರ್ಭದಲ್ಲಿ....

ಶ್ರೀ ಎಸ್.ಎಸ್. ಪಾಟೀಲ್ : ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸಿ ಮಾತನಾಡಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಕಾಂದಾಯ ಸಚಿವರು ಜವಾಬ್ದಾರಿ ತೆಗೆದುಕೊಂಡ ಮೇಲೆ ತಾವೇನು ಹೇಳುತ್ತೀರಿ ಕಂದಾಯ ಮಂತ್ರಿಗಳು ಏನು ಹೇಳುತ್ತಾರೆ, ಅಂದರೇನು ಅವರೇ ಭೇಟಿ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಷಯ ಕಂದಾಯ ಸಚಿವರಿಗೆ ಸಂಬಂಧಪಟ್ಟದ್ದುದು ನಾನು ಇಲ್ಲಾ ಅಂತ ಹೇಳುವುದಿಲ್ಲ. ನಾವು ಸರ್ಕಾರವನ್ನು ಮಾಡಿದ್ದೇವೆ, ಇಲ್ಲಿಯೂ ಇದ್ದೇವೆ ಎಲ್ಲವನ್ನು ನಾವು ನೋಡಿದ್ದೇವೆ. ಅಂತಿಮವಾದ ತೀರ್ಮಾನ ಯಾರನ್ನು ಅವಲಂಭಿಸಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಅವರು ಇರಲಿ ಅವರ ಜೊತೆಯಲ್ಲಿ ಮುಖ್ಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಲಿ, ಸರ್ಕಾರದ ಮೇಲೆ ತಾವು ಹೇಳುವ ವಿಶ್ವಾಸ ಉಳಿದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಉಪಾಧ್ಯಕ್ಷರೆ, ಅವರು ಮುಖ್ಯಮಂತ್ರಿಗಳನ್ನು ಅನೇಕ ಸಲ ಭೇಟಿಯಾಗಿದ್ದಾರೆ. ಭೇಟಿಯಾದರೂ ಅವರು ಸೌಜನ್ಯಕ್ಕಾದರೂ ಕೂಡ ಮಾತನಾಡಿಲ್ಲವೆಂದರೆ ಅವರ ಮನಸ್ಸಿಗೆ ನೋವಾಗಿ ಅವರು ಈ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.